## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಸರ್ಕಾರಿ ಕಛೇರಿಗಳ ಎಲ್ಲಾ ಹಂತಗಳಲ್ಲಿಯೂ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಉಪಯೋಗಿಸುವ ಬಗ್ಗೆ. ಕನ್ನಡ ಭಾಷಾ ಪರೀಕ್ಷೆ ಕುರಿತು.

ಓದಲಾಗಿದೆ : ಸರ್ಕಾರಿ ಸಂಖ್ಯೆ : ಡಿ.ಪಿ.ಎ.ಆರ್. 461 ಎಸ್.ಎ.ಎಸ್. 94 ದಿನಾಂಕ 19-11-94

ಪ್ರಸ್ತಾವನೆ :

ಮೇಲೆ ಉಲ್ಲೇಖದಲ್ಲಿ ಓದಲಾದ ಸರ್ಕಾರದ ಆದೇಶದ ಕಂಡಿಕೆ 1 ಮತ್ತು 3 ರಲ್ಲಿ ಕೇಡರ್‌ನ ಅಖಿಲ ಭಾರತ ಸೇವೆಯ ಅಧಿಕಾರಿಗಳಿಗೆ ಕನ್ನಡ ಭಾಷಾ ಇಲಾಖಾ ಪರೀಕ್ಷೆಯಲ್ಲಿ ಎಸ್.ಎಸ್.ಎಲ್.ಸಿ. ಯ (ಹತ್ತನೇ ತರಗತಿ) ದ್ವಿತೀಯ ಭಾಷೆ ಕನ್ನಡದಲ್ಲಿ ತೇರ್ಗಡೆ ಹೊಂದುವುದು ಕಡ್ಡಾಯ ಮಾಡಲಾಗಿದೆ. ಮುಂದುವರೆದು, ಸದರಿ ಆದೇಶದ ಕಂಡಿಕೆ 2 ರಲ್ಲಿ ಕರ್ನಾಟಕದ ಐ.ಎ.ಎಸ್. ಪ್ರೊಬೇಷನರುಗಳು ಎಸ್.ಎಸ್.ಎಲ್.ಸಿ. ಯಲ್ಲಾಗಲಿ ಅಥವಾ ಇದಕ್ಕೆ ತತ್ಸಮಾನವೆಂದು ರಾಜ್ಯ ಸರ್ಕಾರವು ಘೋಷಿಸಲ್ಪಟ್ಟ ಇತರೆ ಪರೀಕ್ಷೆಗಳಲ್ಲಿಯಾಗಲಿ ಕನ್ನಡ ಮಾಧ್ಯಮದಲ್ಲಿ ಅಥವಾ ಕನ್ನಡವನ್ನು ಒಂದು ಮುಖ್ಯ ವಿಷಯವನ್ನಾಗಿ ಅಭ್ಯಾಸ ಮಾಡಿ ತೇರ್ಗಡೆ ಹೊಂದಿದ್ದಲ್ಲಿ ಅವರುಗಳು ಕನ್ನಡ ಭಾಷಾ ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಾರೆ ಎಂದು ಹಾಗೂ ಅಂತಹವರು ಸದರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಬಗ್ಗೆ ವಿನಾಯ್ತಿ ಪಡೆಯಲು ಅರ್ಹರೆಂದು ತಿಳಿಸಲಾಗಿದೆ. ಆದಾಗ್ಯೂ ಸಿವಿಲ್ ಸರ್ವಿಸಸ್ ಎಕ್ಸಾಮಿನೇಷನ್ (ಕೇಂದ್ರ ಲೋಕ ಸೇವಾ ಆಯೋಗ ನಡೆಸುವ) ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕನ್ನಡ ಸಾಹಿತ್ಯವನ್ನು ಒಂದು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡು ಅಥವಾ ಎಸ್.ಎಸ್.ಎಲ್.ಸಿಗಿಂತ ಉನ್ನತ ಪರೀಕ್ಷೆಗಳನ್ನು ಅಂದರೆ, ಪದವಿಪೂರ್ವ

ಪರೀಕ್ಷೆ, ಇಂಟರ್ ಮೀಡಿಯಟ್ ಕೋರ್ಸ್ ಅಥವಾ ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿ ಪರೀಕ್ಷೆಗಳಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ತೆಗೆದುಕೊಂಡು ಅಧಿಕಾರಿಗಳು ತೇರ್ಗಡೆ ಹೊಂದಿರುವ ಪ್ರಕರಣಗಳು ದಿನಾಂಕ : 19-12-1994ರ ಆದೇಶದಲ್ಲಿ (ಎಸ್.ಎಸ್.ಎಲ್.ಸಿ. ಮಟ್ಟದಲ್ಲಿ) ತೇರ್ಗಡೆ ಹೊಂದಿದವರಿಗೆ ನೀಡುವ ವಿನಾಯ್ತಿಯನ್ನು ಅಖಿಲ ಭಾರತ ಸೇವೆಗಳ ಅಧಿಕಾರಿ ಪ್ರೊಬೇಷನರುಗಳು ಕನ್ನಡ ಮಾಧ್ಯಮದಲ್ಲಿ ಎಸ್.ಎಸ್.ಎಲ್.ಸಿ. ಅಥವಾ ಕನ್ನಡವನ್ನು ಪ್ರಥಮ ಹಾಗೂ ದ್ವಿತೀಯ ಭಾಷೆಯನ್ನು ಅಥವಾ ಒಂದು ಐಚ್ಛಿಕ ವಿಷಯವನ್ನಾಗಿ ಪಡೆದು ತೇರ್ಗಡೆ ಹೊಂದದಿದ್ದರೂ ಕೇಂದ್ರ ಲೋಕಸೇವಾ ಆಯೋಗವು ಐ.ಎ.ಎಸ್./ಐ.ಪಿ.ಎಸ್./ಐ.ಎಫ್.ಎಸ್. ಆಯ್ಕೆಗಾಗಿ ನಡೆಸುವ ಸಂಯುಕ್ತ Civil Servoces Examinations ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕನ್ನಡ ಭಾಷೆ / ಕನ್ನಡ ಸಾಹಿತ್ಯವನ್ನು ಐಚ್ಛಿಕ ವಿಷಯವನ್ನಾಗಿ ಅಥವಾ ಎಸ್.ಎಸ್.ಎಲ್.ಸಿ. ಗಿಂತ ಇತರ ಉನ್ನತ ಪರೀಕ್ಷೆಗಳನ್ನು ಅಂದರೆ ಪದವಿ ಪೂರ್ವ ಪರೀಕ್ಷೆ ಇಂಟರ್ ಮೀಡಿಯಟ್ ಕೋರ್ಸ್ ಅಥವಾ ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿ ಪರೀಕ್ಷೆಗಳಲ್ಲಿ ಒಂದು ಭಾಷೆಯಾಗಿ ಅವರು ತೆಗೆದುಕೊಂಡು ತೇರ್ಗಡೆ ಹೊಂದಲು ಅವಶ್ಯಕವಾಗ ಅಂಶಗಳನ್ನು ಪಡೆದಿದ್ದರೆ ಅಂತಹವರಿಗೆ ಸದರಿ ವಿನಾಯ್ತಿಯನ್ನು ವಿಸ್ತರಿಸುವ ಬಗ್ಗೆ ಸರ್ಕಾರವು ಪರಿಶೀಲಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 52 ಬಿ ಸೇಅಸೆ 2000 ಬೆಂಗಳೂರು, ದಿನಾಂಕ : 9-11-2001

ಸರ್ಕಾರದ ಆದೇಶ ಸಂಖ್ಯೆ : ಡಿ.ಪಿ.ಎ.ಆರ್. 461 ಎಸ್.ಎ.ಎಸ್. 94 ದಿನಾಂಕ : 19-11-94 ನ್ನು ಮುಂದುವರೆಸಿ, ಅಖಿಲ ಭಾರತ ಸೇವೆಯ ಪ್ರೊಬೇಷನರಿ ಅಧಿಕಾರಿಗಳು ಸದರಿ ಸರ್ಕಾರದ ಆದೇಶದಲ್ಲಿನ ಕಂಡಿಕೆ 2ರಲ್ಲಿ ತಿಳಿಸಿರುವ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವ ಅ.ಭಾ.ಸೇ. ಪ್ರೊಬೇಷನರಿ ಅಧಿಕಾರಿಗಳಲ್ಲದೇ, ಅಖಿಲ ಭಾರತ ಸೇವೆಗಳ ಪ್ರೊಬೇಷನರುಗಳು / ಅಧಿಕಾರಿಗಳು ಈ ಕೆಳಕಾಣಿಸಿದ ಪರೀಕ್ಷೆಗಳಲ್ಲಿ ಯಾರು ತೇರ್ಗಡೆ ಹೊಂದಿರುವರೋ ಅಂತಹ ಪ್ರಬೇಷನರುಗಳು/ ಅಧಿಕಾರಿಗಳು ಸಹ ಎಸ್.ಎಸ್.ಎಲ್.ಸಿ. ಮಟ್ಟದ ಕನ್ನಡ ಭಾಷಾ ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಬಗ್ಗೆ ವಿನಾಯಿತಿ ಪಡೆಯಲು ಅರ್ಹರೆಂದು ಸರ್ಕಾರವು ಆದೇಶಿಸಿದೆ.

1) ಐ.ಎ.ಎಸ್/ಐ.ಪಿ.ಎಸ್./ಐ.ಎಫ್.ಎಸ್. ಆಯ್ಕೆಗಾಗಿ ಕೇಂದ್ರ ಲೋಕಸೇವಾ ಆಯೋಗವು ನಡೆಸುವ ಸಂಯುಕ್ತ ಸಿವಿಲ್ ಸರ್ವಿಸಸ್ ಎಕ್ಸಾಮಿನೇಷನ್‌ನಲ್ಲಿ ಕನ್ನಡ ಸಾಹಿತ್ಯ ಅಥವಾ ಕನ್ನಡ ಭಾಷೆಯನ್ನು ಒಂದು ವಿಷಯವನ್ನಾಗಿ ಪಡೆದು ಅವನು / ಅವಳು ಕನಿಷ್ಠ 35ರಷ್ಟು ಅಂಕಗಳನ್ನು ಪಡೆದಿರುವ,

2) ಎಸ್.ಎಸ್.ಎಲ್.ಸಿ. ಮಟ್ಟಕ್ಕಿಂತ ಇತರ ಉನ್ನತ ಪರೀಕ್ಷೆಗಳು ಅಂದರೆ ಪದವಿಪೂರ್ವ ಪರೀಕ್ಷೆ/ ಇಂಟರ್ ಮೀಡಿಯಟ್ ಅಥವಾ ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿ ಪರೀಕ್ಷೆಗಳಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ತೆಗೆದುಕೊಂಡು ಅವನು / ಅವಳು ಕನಿಷ್ಠ 35ರಷ್ಟು ಅಂಕ ಅಥವಾ ವಿಷಯದಲ್ಲಿ ತೇರ್ಗಡೆ ಹೊಂದುವಷ್ಟು ಅಂಕಗಳು.

ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ/-

**(ನ. ಪ್ರಭಾಕರ)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಆಸು.ಇ (ಸೇವೆಗಳು - 1)

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ / ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲು ಹಾಗೂ 250 ಪ್ರತಿಗಳನ್ನು ಈ ಇಲಾಖೆಗೆ ಒದಗಿಸಲು ಕೋರಿದೆ.

ಪ್ರತಿಗಳು :

1. ಎಲ್ಲಾ ಐ.ಎಸ.ಎಸ್. ಅಧಿಕಾರಿಗಳಿಗೆ

2. ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಬೆಂಗಳೂರು / ಎಲ್ಲಾ ಐ.ಪಿ.ಎಸ್. ಅಧಿಕಾರಿಗಳಿಗೆ ಪರಿಚಲಿಸುವ ಸಲುವಾಗಿ.

3. ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, ಬೆಂಗಳೂರು - 3/ ಎಲ್ಲಾ ಐ.ಎಫ್.ಎಸ್. ಅಧಿಕಾರಿಗಳಿಗೆ ಪರಿಚಲಿಸುವ ಸಲುವಾಗಿ.

4. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು

5. ಸರ್ಕಾರದ ಕಾರ್ಯದರ್ಶಿ, ಭಾರತ ಸರ್ಕಾರ, ಸಿಬ್ಬಂದಿ ಮತ್ತು ತರಬೇತಿ ಇಲಾಖೆ, ನಾರ್ತ್ ಬ್ಲಾಕ್, ನವದೆಹಲಿ - 1

6. ಸರ್ಕಾರದ ಕಾರ್ಯದರ್ಶಿ, ಭಾರತ ಸರ್ಕಾರ, ಗೃಹ ಮಂತ್ರಾಲಯ, ನವದೆಹಲಿ.

7. ಸರ್ಕಾರದ ಕಾರ್ಯದರ್ಶಿ, ಭಾರತ ಸರ್ಕಾರ, ಪರಿಸರ ಮತ್ತು ಅರಣ್ಯ ಇಲಾಖೆ, ನವದೆಹಲಿ ನಿರ್ದೇಶಕರು, ಲಾಲ್ ಬಹಾದ್ದೂರ್ ಶಾಸ್ತ್ರಿ ನ್ಯಾಷನಲ್ ಅಕಾಡೆಮಿ ಆಫ್ ಅಡ್ಮಿನಿಸ್ಟ್ರೇಷನ್, ಮುಸ್ಸೋರಿ. ನಿರ್ದೇಶಕರು, ನ್ಯಾಷನಲ್ ಪೊಲೀಸ್ ಅಕಾಡೆಮಿ ಹೈದರಾಬಾದ್/ ನ್ಯಾಷನಲ್ ಅಕಾಡೆಮಿ, ಡೆಹ್ರಾಡೂನ್.

8. ನಿರ್ದೇಶಕರು, ಕೇಂದ್ರೀಯ ಭಾರತೀಯ ಭಾಷೆಗಳ ಸಂಸ್ಥೆ ಮೈಸೂರು - 6.

9. ಮಹಾನಿರ್ದೇಶಕರು, ಆಡಳಿತ ಸುಧಾರಣೆ ಮತ್ತು ತರಬೇತಿ, ಮೈಸೂರು - 11.

10. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

11. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

12. ರಾಜ್ಯಪಾಲರ ಕಾರ್ಯದರ್ಶಿ, ಮುಖ್ಯ ಮಂತ್ರಿಯವರ ಅಪರ ಕಾರ್ಯದರ್ಶಿ.

13. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ / ವಿಧಾನ ಪರಿಷತ್.

14. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು - 1.

15. ಎಲ್ಲಾ ವಿಭಾಗಾಧಿಕಾರಿಗಳು / ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪೊಲೀಸ್ ಅಧಿಕಾರಿಗಳು.

16. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ.

17. ಮುಖ್ಯ ಕಾರ್ಯದರ್ಶಿ, ಅಪರ ಮುಖ್ಯ ಕಾರ್ಯದರ್ಶಿ / ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು / ಅಪರ ಮುಖ್ಯ ಕಾರ್ಯದರ್ಶಿ ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಮತ್ತು ಸಾರಿಗೆ ಇಲಾಖೆ, ಅಪರ ಮುಖ್ಯ ಕಾರ್ಯದರ್ಶಿ ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆರವರ ಆಪ್ತ ಕಾರ್ಯದರ್ಶಿಗಳಿಗೆ

18. ಜಂಟಿ ಕಾರ್ಯದರ್ಶಿ, ಸಿಆಸುಇ (ಎಲ್ ಅಂಡ್ ಆರ್.ಎಂ.)

20. ಕಾರ್ಯದರ್ಶಿ, ಐ.ಎ.ಎಸ್. ಅಧಿಕಾರಿಗಳ ಸಂಘ, ಇನ್‌ಫ್ಯಾಂಟ್ರಿ ರಸ್ತೆ ಬೆಂಗಳೂರು - 1.

21. ಕಾರ್ಯದರ್ಶಿ, ಐಪಿಎಸ್ ಅಧಿಕಾರಿಗಳ ಸಂಘ, ಬೆಂಗಳೂರು.

22. ಕಾರ್ಯದರ್ಶಿ, ಐಎಫ್ ಎಸ್ ಅಧಿಕಾರಿಗಳ ಸಂಘ, ಬೆಂಗಳೂರು.

23. ಮಹಾಲೇಖಪಾಲಕರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು-1.

24. ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು.ಇ. (ಲೆಕ್ಕಪತ್ರಗಳು/ ಸೇವೆಗಳು 2-3 / ಐ.ಆರ್.ಎಲ್.ಎ.)

25. ಶಾರಕ / ಹೆ.ಪ್ರ.